೧) ಪ್ರತಿ ಶನಿವಾರ, ಭಾನುವಾರ ಮತ್ತು ಇತರೆ ರಜಾದಿನಗಳಲ್ಲಿ ಗೈರು ಹಾಜರಿ, ಜಾರಿಯಲ್ಲಿ ಕೇವಲ ಕಬಿನಿ ಯೋಜನಾ ವೃತ್ತದಲ್ಲಿ ಮಾತ್ರ ತಂದಿದ್ದು, ಇನ್ನಿತರ ಸರ್ಕಲ್ ಮತ್ತು ವಿಭಾಗಗಳಲ್ಲಿ ಕಾನೂನು ಜಾರಿಯಲ್ಲಿ ಇಲ್ಲದೆ ಇರುವ ತಾರತಮ್ಯ ಸರಿಪಡಿಸಬೇಕು.

೨) ತಿಂಗಳ ಪೂರ್ತಿ ಕೆಲಸವನ್ನು ಕೊಡಬೇಕು.

೩) ದಿನಗೂಲಿ ನೌಕರರ ಸೇವೆಯನ್ನು ಖಾಯಂ ಮಾಡಬೇಕು.

೪) ದಿನಗೂಲಿ ನೌಕರರ ವರ್ಗಾವಣೆಯನ್ನು ರದ್ದುಗೊಳಿಸಬೇಕು.

ಇನ್ನಿತರ ಇವರ ಬೇಡಿಕೆಗಳು ನ್ಯಾಯ ಸಮ್ಮತವಾಗಿರುವುದರಿಂದ ಮಾನವೀಯತೆಯ ದೃಷ್ಟಿಯಿಂದ ಮಾನ್ಯ ನೀರಾವರಿ ಮಂತ್ರಿ ಲೋಕೋಪಯೋಗಿ ಸಚಿವರು ಇದ್ದು ಹೆಚ್ಚು ಗಮನ ಕೊಟ್ಟು ಈ ಎನ್. ಎಂ. ಆರ್. ದಿನಗೂಲಿಗಾರರ ಕಷ್ಟವನ್ನು ಪರಿಹರಿಸಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಈ ಒಂದು ಕಬಿನಿ ಜಲಾಶಯದ ಯೋಜನೆಯ ಹಿಂಭಾಗದಲ್ಲಿ ಕೆಲಸ ಮಾಡತಕ್ಕ ಎನ್. ಎಂ. ಆರ್. ನೌಕರರು ಮಾನ್ಯ ಸದಸ್ಯರು ಹೇಳಿದ ಹಾಗೆ ಕೆಲವು ಸಮಸ್ಯೆಗಳ ಬಗ್ಗೆ ಅವರು ಏನೋ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಶಾಂತಿಯುತವಾಗಿ ಅವರು ನನ್ನ ಕಡೆ ಚರ್ಚೆ ಮಾಡಿದ್ದಾರೆ. ಸದಸ್ಯರೂ ಕೂಡ ನಿಯೋಗದಲ್ಲಿದ್ದಾರೆ. ಜಯಕರ್ನಾಟಕ ಮಂಡಿಂಡತ್ವ ದಲ್ಲಿ ಈ ಎಲ್ಲಾ ನೌಕರರೂ ಬಂದಿದ್ದರು. ಅವರ ಬಗ್ಗೆ ಸರ್ಕಾರದ ನೌಕರರು ಬೇರೆ ಕಡೆ ಇರತಕ್ಕಂಥ ಸವಲತ್ತುಗಳು ಏನು ಇದೆ. ಈ ಜಲಾಶಯದ ಹಿಂಭಾಗದಲ್ಲಿ ಇರತಕ್ಕಂಥ ಎನ್. ಎಂ. ಆರ್. ಕೆಲಸಗಾರರಿಗೆ ಕೊಡಬೇಕು ಎಂದು ಒತ್ತಾಯ ಏನು ಇದೆ, ಅದರ ಬಗ್ಗೆ ಸರ್ಕಾರ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತದೆ ಎಂದು ಹೇಳುತ್ತೇನೆ. ಧರಣಿ ಮಾಡುವುದನ್ನ ಕೈಬಿಡಬೇಕೆಂ ಎಂದು ಹೇಳಿದ್ದೇನೆ. ಅದಕ್ಕೆ ಅವರು ಒಪ್ಪಿಕೊಂಡು ಹೋಗಿದ್ದಾರೆ. ಬೇರೆ ಯಾವ ಸವಲತ್ತುಗಳು ಇದೆಯೋ ಅದನ್ನು ಎಕ್ಸ್‌ಟೆಂಡ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

(ii) ಶಿವಮೊಗ್ಗ ಜಿಲ್ಲೆಯಂ ಪ್ರಮುಂಖ ಜನತಾ ಮುಖಿಂಡರು ಹಾಗೂ ಮಾಜಿ ಮುಂಖ್ಯ ಮಂತ್ರಿಯವರೊಬ್ಬರ ಬಂಧುಗಳ ನೀರಾವರಿ ಇಲಾಖೆಗೆ ಸೇರಿದ ನಾಲೆಯ ಮೇಲೆ ಭವ್ಯವಾದ ನರ್ಸಿಂಗ್ ಹೋಂನ್ನು ನಿರ್ಮಿಸುತ್ತಿರುವ ಬಗ್ಗೆ

ಅಧ್ಯಕ್ಷರು.—ರಾಮಪ್ಪನವರೇ, ನಿಮಗೆ ಕನ್ನಡ ಸರಿಯಾಗಿ ಬರುವುದಿಲ್ಲ. ನಾನೇ ಓದಿ ಹೇಳುತ್ತೇನೆ. ಓದಲೇನು ?

ಶ್ರೀ ಎಂ. ರಾಮಪ್ಪ.—ತಾವೇ ಓದಿಬಿಡಿ.

ಅಧ್ಯಕ್ಷರು.—ಶಿವಮೊಗ್ಗ ಜಿಲ್ಲೆಯ ಪ್ರಮುಖ ಜನತಾ ಮುಖಿಂಡರಂ ಹಾಗೂ ಸಚಿವರು ಮತ್ತು ಮಾಜಿ ಮುಖ್ಯ ಮಂತ್ರಿಯವರೊಬ್ಬರ ಬಂಧುವೆಂದು ಹೇಳಿಕೊಳ್ಳಲಾದ ಹಾಗೂ ಜನತಾ ಪಕ್ಷದ ಬೆಂಬಲಿಗರೆನ್ನಲಾದ ವೈದ್ಯರೊಬ್ಬರು ಖಾಸಗಿಯವರ ಜಾಗವನ್ನು ಆಕ್ರಮವಾಗಿ ಕಬಳಿಸಿರುವುದಲ್ಲದೆ ನೀರಾವರಿ ಇಲಾಖೆಗೆ ಸೇರಿದ ನಾಲೆಯೊಂದನ್ನು ಕಬಳಿಸಿ ಭವ್ಯ ನರ್ಸಿಂಗ್ ಹೋಂ ಒಂದನ್ನು ನಾಲೆಯ ಮೇಲೆ ನಿರ್ಮಿಸುತ್ತಿರುವ ಪ್ರಕರಣವೊಂದು ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಸಾಸಿವೆ ಹಳ್ಳಿಯಲ್ಲಿ ಇತ್ತೀಚೆಗೆ ಬೆಳಕಿಗೆ ಬಂದಿದೆ.

ಮೇಲ್ಕಂಡ ಸಾಸಿವೆಹಳ್ಳಿ ಹೋಬಳಿಯ ಕೇಂದ್ರವಾಗಿದ್ದು ಊರಿನ ಮುಂಖ್ಯ ಭಾಗದಲ್ಲೇ ಭದ್ರಾ ನಾಲೆ ಹರಿಯುತ್ತದೆ. ಇಲ್ಲಿನ ಮುಖ್ಯ ರಸ್ತೆಗೆ ಅಡ್ಡಲಾಗಿ ಹಾಕಿರುವ ಸಣ್ಣ ಸೇತುವೆಯೊಂದರ ಮೂಲಕವೇ ಮಲೇಬೆನ್ನೂರು ವಿಭಾಗಕ್ಕೆ ಸೇರಿದ ಭದ್ರಾ ನಾಲೆಯು ಅನವೇರಿ ಬ್ರಾಂಚ್ ಕೆನಾಲ್ ಹರಿಯುತ್ತಿದೆ. ಈ ನಾಲಾ ಪಕ್ಕದಲ್ಲಿ ಜಾಗವನ್ನು ಪಡೆದಿರುವರೆನ್ನಲಾದ ಸ್ಥಳೀಯ ವೈದ್ಯ ಡಾ. ರಾಜಶೇಖರಪ್ಪ ಎಂಬುವರು ಸುಮಾರು ೨೦ ಅಡಿ ಅಗಲ ಸೂರು ಅಡಿ ಉದ್ದದ ಈ ನಾಲಾ ಜಾಗವನ್ನು ಸೇರಿಸಿಕೊಂಡು ನಾಲೆಯ ಎರಡು ಕಡೆಗಳಲ್ಲೂ ಪಿಲ್ಲರ್‌ಗಳನ್ನು ಹಾಕಿ ಅದರ ಮೇಲೆ ನರ್ಸಿಂಗ್ ಹೋಂ ನಿರ್ಮಾಣ ಕೈಗೊಂಡಿದ್ದಾರೆ. ನಾಲಾ ಜಾಗವಲ್ಲದೆ ಅಕ್ಕಪಕ್ಕದ ಖಾಸಗಿಯವರ

ಭೂಮಿಯನ್ನು ಅತಿಕ್ರಮಿಸಿಕೊಂಡಿರುವುದಾಗಿ ತಿಳಿದು ಬಂದಿದೆ. ಈಗಾಗಲೇ ಮುಕ್ತಾಯದ ಹಂತಕ್ಕೆ ಬಂದಿರುವ ಈ ಅಕ್ರಮ ಕಟ್ಟಡ ನಿರ್ಮಾಣ ರಾಜ್ಯ ನೀರಾವರಿ ಇಲಾಖೆಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಅವರ ಗಮನಕ್ಕೆ ಬಂದಿದ್ದಾಗ್ಯೂ ಯಾವ ಅಡ್ಡಿ ಆತಂಕವಿಲ್ಲದೆ ಕಟ್ಟಡದ ಕೆಲಸ ನಿರಾತಂಕವಾಗಿ ಸಾಗಿದೆ. ಮೇಲ್ಕಂಡ ಇಂಜಿನಿಯರ್ ಅವರಿಗೆ ಈ ಕಟ್ಟಡದ ವಿಷಯ ಪೂರ್ಣವಾಗಿ ಗೊತ್ತಿದ್ದರೂ ಅವರು ಯಾವ ಕ್ರಮವನ್ನೂ ಕೈಗೊಳ್ಳದೆ ಇರುವುದನ್ನು ನೋಡಿದಲ್ಲಿ ಅವರೂ ಕೂಡ ಈ ಅಕ್ರಮದಲ್ಲಿ ಭಾಗಿಯಾಗಿರುವರೆಂದು ಊಹಿಸಬಹುದಾಗಿದೆ. ಈ ವೈದ್ಯರು ಕಟ್ಟಡದ ನಿರ್ಮಾಣಕ್ಕೆ ಮೈಸೂರು ಬ್ಯಾಂಕಿನ ಶಿವಮೊಗ್ಗ ಶಾಖೆ ಹಾಗೂ ಸಾಸಿವೆಹಳ್ಳಿಯ ಕರ್ನಾಟಕ ಬ್ಯಾಂಕ್ ಶಾಖೆಗಳು ಸುಮಾರು ೨ ಲಕ್ಷ ರೂಪಾಯಿಗಳ ಸಾಲವನ್ನು ಈ ವೈದ್ಯರಿಗೆ ನೀಡಿರುವುದೆನ್ನಲಾಗಿದೆ. ಮೇಲ್ಕಂಡ ಅಕ್ರಮ ವ್ಯವಹಾರ ಸ್ಥಳೀಯ ಶಾಸಕರ ಗಮನಕ್ಕೆ ಬಂದಿದ್ದಾಗ್ಯೂ ಸಚಿವರು ವೈದ್ಯರ ಹಿಂದೆ ಇರುವುದರಿಂದ ಶಾಸಕರ ಬಾಯಿಕಟ್ಟಿದಂತೆ ಆಗಿದೆ.

ಸರಕಾರದವರು ಕೂಡಲೇ ಈ ಬಗ್ಗೆ ವಿಚಾರಣೆ ನಡೆಸಿ, ನಾಲೆಯ ಮೇಲೆ ಅಕ್ರಮವಾಗಿ ನಿರ್ಮಿಸುತ್ತಿರುವ ಕಟ್ಟಡವನ್ನು ಕೆಡವಿಸುವುದಲ್ಲದೆ, ಪಾಸಗಿಯವರ ಜಮೀನನ್ನು ಅಕ್ರಮಿಸಿರುವುದನ್ನೂ ತೆರವು ಮಾಡಿಸಿಕೊಡಬೇಕೆಂದೂ, ಇದರಿಂದಾಗಿ ಮುಂದೆ ಆಗಬಹುದಾದ ಅನಾಹುತವನ್ನು ತಪ್ಪಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಸಚಿವರು).—ನಿಯಮ ೩೩ರ ವಿಧಿಯ ಪ್ರಕಾರ ಈ ಸದನದಲ್ಲಿ ಸನ್ಮಾನ್ಯ ಸದಸ್ಯರಾದ ಶ್ರೀ ಎಂ. ರಾಮಪ್ಪನವರು ಮತ್ತು ಶ್ರೀ ಉಮರಬ್ಬನವರು ಬಹಳ ಪ್ರಾಮುಖ್ಯವಾದ ವಿಷಯವನ್ನು ಎತ್ತಿದ್ದಾರೆ. ಯಾವ ಪೂಜೆ ಮುಖ್ಯ ಮಂತ್ರಿಗಳ ಸಂಬಂಧಿಕರೋ ನನಗಂತೂ ಗೊತ್ತಿಲ್ಲ. ಒಟ್ಟಾರೆ ಸರ್ಕಾರಿ ನಾಲೆಯಲ್ಲಿ ಅಕ್ರಮಣ ಮಾಡಿದ್ದಾರೆ ಎಂದು ಕೇಳಿದೆ. ಅಕ್ರಮಣವನ್ನು ಮಾಡಿರತ್ಕಂಥದ್ದರ ಬಗ್ಗೆ ತನಿಖೆ ನಡೆಸುತ್ತೇನೆ. ವರದಿಯನ್ನು ತರಿಸುತ್ತೇನೆ. ಅವರ ಮೇಲೆ ಕ್ರಮವನ್ನು ಕೈಗೊಳ್ಳುತ್ತೇನೆ. ಇದಕ್ಕಾಗಿ ಸರ್ಕಾರ ತೀವ್ರವಾದ ಪ್ರಯತ್ನ ಮಾಡುತ್ತಿದೆ ಎಂದು ಹೇಳುತ್ತೇನೆ.

ಶ್ರೀ ಎಂ. ರಾಮಪ್ಪ.—ಎಷ್ಟು ದಿವಸದಲ್ಲಿ ?

ಅಧ್ಯಕ್ಷರು.—ಇದರ ಬಗ್ಗೆ ಚರ್ಚೆ ಇಲ್ಲ. ಬೇಕಾದರೆ ಅವರ ಪಕ್ಕದಲ್ಲಿ ಹೋಗಿ ಕುಳಿತುಕೊಂಡು ಕೇಳಿ.

(iii) ಬಂಟ್ವಾಳ ತಾಲ್ಲೂಕು ಬರಿಮಾರು ಗ್ರಾಮದ ಪಾರ್ಪಜೆ ಎಂಬಲ್ಲಿ ಬಡ ಗೇಣಿದಾರ ಶ್ರೀ ಶೇಷಪ್ಪಗೌಡ ಎಂಬುವವರಿಗೆ ಭೂ ಮಾಲೀಕರು ಹೊಡೆದು ಥಳಿಸಿರುವ ಬಗ್ಗೆ

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೆ. ಕಳೆದ ತಾರೀಖು ೨೨ರಂದು ಬಂಟ್ವಾಳ ತಾಲ್ಲೂಕು ಬರಿಮಾರು ಗ್ರಾಮದ ಪಾರ್ಪಜೆ ಎಂಬಲ್ಲಿ ಬಡ ಗೇಣಿದಾರ ಶ್ರೀ ಶೇಷಪ್ಪಗೌಡ (೮೭) ಎಂಬುವರ ಸ್ಥಳಕ್ಕೆ ಆ ಸ್ಥಳದ ಭೂ ಮಾಲೀಕನ ಕಡೆಯವರೆನ್ನಲಾದ ಕೆಲವರು ಅಕ್ರಮವಾಗಿ ಪ್ರವೇಶಿಸಿ ಶೇಷಪ್ಪಗೌಡ ಅವರ ಪತ್ನಿ ವೆಂಕಮ್ಮ (೭೦) ಇಬ್ಬರು ಮಕ್ಕಳಾದ ಜನಾರ್ದನ ಮತ್ತು ತಿಮ್ಮಕ್ಕ ಅವರನ್ನು ಥಳಿಸಿ ದೊಣ್ಣೆಗಳಿಂದ ಹೊಡೆದು ತೀವ್ರ ಜಖಂಗೊಳಿಸಿದ ಘಟನೆ ನಡೆದಿದೆ. ಜಖಂಗೊಂಡ ಎಲ್ಲರೂ ಈಗ ಮಂಗಳೂರಿನ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಗೇಣಿದಾರ ಶೇಷಪ್ಪಗೌಡರ ಸ್ವಾಧೀನದಲ್ಲಿರುವ ಈ ಭೂಮಿಯನ್ನು ಬಲಾತ್ಕಾರವಾಗಿ ಸ್ವಾಧೀನ ಪಡಿಸುವ ಉದ್ದೇಶದಿಂದ ಈ ಕೃತ್ಯ ಮಾಡಲಾಗಿದೆ. ಸದರಿ ಭೂಮಿಗೆ ಸಂಬಂಧಪಟ್ಟಂತೆ ವಿವಾದವು ಇತ್ಯರ್ಥಕ್ಕಾಗಿ ಬಂಟ್ವಾಳ ಭೂ ನ್ಯಾಯ ಮಂಡಳಿಯಲ್ಲಿ ಬಾಕಿ ಇರುವಾಗಲೇ ಭೂ ಮಾಲೀಕ ವರ್ಗದವರು ಮಾಡಿದ ಈ ಅಮಾನವೀಯ ಕೃತ್ಯವನ್ನು ಖಂಡಿಸಲೇಬೇಕಾಗಿದೆ.

ಸರ್ಕಾರವು ಕೂಡಲೇ ಈ ಬಡ ಶೇಷಪ್ಪಗೌಡರ ಕುಟುಂಬಕ್ಕೆ ಸಕಲ ರಕ್ಷಣೆ ಒದಗಿಸಬೇಕು, ಈ ವಿರಪರಾಧಿ ಕುಟುಂಬಕ್ಕೆ ಭೂ ಮಾಲೀಕ ವರ್ಗದವರಿಂದ ಇನ್ನು ಮುಂದೆ ಬರಬಹುದಾದ ಉಪಟಳವನ್ನು ತಪ್ಪಿಸಬೇಕಾಗಿ ಹಾಗೂ ತಪ್ಪಿತಸ್ಥ ಭೂ ಮಾಲೀಕರ ವಿರುದ್ಧ ಉಗ್ರ ಕ್ರಮ ಕೈಗೊಂಡು ಬಡ ಶೇಷಪ್ಪ ಗೌಡರಿಗೆ ನ್ಯಾಯ ದೊರಕಿಸಿಕೊಡಬೇಕಾಗಿ ಸರ್ಕಾರವನ್ನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.